

# ಶ್ರವಣ ಸಮಸ್ಯೆ: ಭಾವುಕರಾದ ಅಲ್ಕಾ

ಮಧುರ ಕಂಠದ ಗಾಯಕಿ ಅಲ್ಕಾ ಯಾಗ್ನಿಕ್ ಅಪರೂಪದಲ್ಲಿ ಅಪರೂಪ ಎನ್ನುವಂತಹ ಶ್ರವಣ ಸಮಸ್ಯೆಯೊಂದನ್ನು ಎದುರಿಸುತ್ತಿದ್ದಾರೆ.

'ಸೆನ್ಸರಿ ನ್ಯೂರಲ್ ನರ್ವ್ ಹಿಯರಿಂಗ್ ಲಾಸ್' ಎಂಬುದೇ ಆ ಸಮಸ್ಯೆ. ವೈದ್ಯರ ಪರಿಭಾಷೆಯ ಈ ಸಂಗತಿಯನ್ನು ಬಿಡಿಸಿ ಹೇಳುವುದಾದರೆ, ಕಿವಿಯ ನರವು ಶ್ರವಣ ತರಂಗಗಳನ್ನು ಮಿದುಳಿಗೆ ತಲುಪಿಸುವಲ್ಲಿ ವಿಫಲವಾಗಿರುವುದರಿಂದ ಉದ್ಭವಿಸಿರುವ ಸಮಸ್ಯೆ ಇದು. ವೈರಲ್ ಜ್ವರ ಬಾಧಿಸಿದ ಕೆಲವರಲ್ಲಿ ಇಂತಹ ತೊಂದರೆ ಕಾಣಿಸಿಕೊಳ್ಳುತ್ತದೆ.

ಒಂದೊಮ್ಮೆ ವಿಮಾನದಿಂದ ಇಳಿದ ಮೇಲೆ ತಮಗೆ ಏನೂ ಕೇಳಿಸುತ್ತಿಲ್ಲ ಎಂದು ಅಲ್ಕಾ ಅವರಿಗೆ ಅನ್ನಿಸಿದೆ. ಕೆಲವು ದಿನಗಳ ನಂತರವೂ ಅದೇ ಸಮಸ್ಯೆ ಇದ್ದುದರಿಂದ ವೈದ್ಯರನ್ನು ಭೇಟಿ ಮಾಡಿ, ಪರೀಕ್ಷಿಸಿಕೊಂಡಿದ್ದಾರೆ. ಇತ್ತೀಚೆಗೆ ಯಾವುದೇ ಕಾರ್ಯಕ್ರಮಗಳಲ್ಲಾಗಲೀ, ವೇದಿಕೆಗಳಲ್ಲಿ ಆಗಲೀ ಅವರು ಕಾಣಿಸಿಕೊಂಡಿರಲಿಲ್ಲ. ಹೀಗಾಗಿ ಸಹಜವಾಗಿಯೇ ಅವರು ಎಲ್ಲಿ ಮರೆಯಾದರು ಎಂಬ ಪ್ರಶ್ನೆ ಹುಟ್ಟಿತ್ತು.

ಸಾಮಾಜಿಕ ಮಾಧ್ಯಮದಲ್ಲಿ ತಮ್ಮ ಸಮಸ್ಯೆಯನ್ನು ಹಂಚಿಕೊಂಡ ಸುದೀರ್ಘ ಪೋಸ್ಟ್ ಅನ್ನು ಅಲ್ಕಾ ಹಾಕಿದ್ದಾರೆ. 'ಬಹಳ ದಿನಗಳಿಂದ ಈ ತೊಂದರೆ ನನ್ನನ್ನು ಕಾಡುತ್ತಿತ್ತು. ಗಟ್ಟಿ ಮನಸ್ಸು ಮಾಡಿ, ಎಲ್ಲರಲ್ಲಿ ಇದನ್ನು ಹಂಚಿಕೊಳ್ಳಲೆಂದು ಈ ಪೋಸ್ಟ್ ಹಾಕುತ್ತಿದ್ದೇನೆ...' ಎಂಬ ಒಕ್ಕಣೆಯಿಂದ ಪೋಸ್ಟ್ ಪ್ರಾರಂಭಿಸಿರುವ ಅವರು, ತಮಗೆ ಆಗಿರುವ ತೊಂದರೆಯ ವಿವರಗಳನ್ನು ದಾಖಲಿಸಿದ್ದಾರೆ.

ಅಷ್ಟೇ ಅಲ್ಲದೆ, ಈ ಕಾಲದಲ್ಲಿ ಅನೇಕರು ವಾಲ್ಯೂಮ್ ಹೆಚ್ಚು ಮಾಡಿಕೊಂಡು ಸಂಗೀತ ಕೇಳುವುದು, ಹೆಚ್ಚು ಹೊತ್ತು ಇಯರ್‌ಪಾಡ್‌ಗಳನ್ನು ಕಿವಿಗೆ ಸಿಕ್ಕಿಸಿಕೊಂಡಿರುವುದನ್ನು ವಿರೋಧಿಸಿದ್ದಾರೆ. ಅಂಥವರಿಗೆ ಕಿವಿಮಾತು ಹೇಳಿದ್ದಾರೆ. 'ವಾಲ್ಯೂಮ್ ಕಡಿಮೆ ಇಟ್ಟುಕೊಂಡೇ ಸಂಗೀತ ಆಸ್ವಾದಿಸಿ. ಸುದೀರ್ಘಾವಧಿ ಇಯರ್‌ಪಾಡ್‌ಗಳನ್ನು ಹಾಕಿಕೊಂಡು ಸಂಗೀತ ಕೇಳಬೇಡಿ. ಇದರಿಂದ ಕಿವಿಯೊಳಗಿನ ಸ್ನಾಯುಗಳು ಹಾಗೂ ನರಮಂಡಲಕ್ಕೆ ತೊಂದರೆ ಆಗುತ್ತದೆ' ಎಂದು ಸಲಹೆ ನೀಡಿದ್ದಾರೆ.

ತಾವು ಬೇಗ ಗುಣಮುಖರಾಗಲೆಂದು ಪ್ರಾರ್ಥಿಸುವಂತೆಯೂ ಅವರು ಜನರಲ್ಲಿ ಕೇಳಿಕೊಂಡಿದ್ದಾರೆ.

ವೈದ್ಯರ ಪ್ರಕಾರ ಈಗ ಅಲ್ಕಾ ಅವರಿಗೆ ಉಂಟಾಗಿರುವ ಸಮಸ್ಯೆಯನ್ನು ಸರಿಪಡಿಸುವುದು ತುಂಬಾ ಕಷ್ಟ. ಆದರೂ ಅವರು ಪ್ರಯತ್ನವನ್ನು ಮುಂದುವರೆಸಿದ್ದಾರೆ. ■

# ಪ್ರೇಮದಲ್ಲೂ ಶ್ರದ್ಧೆ

ಶ್ರದ್ಧಾ ಕಪೂರ್ ಹಾಗೂ ರಾಹುಲ್ ಮೋದಿ ಇಬ್ಬರ ನಡುವೆ ಪ್ರೇಮ ಪಲ್ಲವಿಸಿ ವರ್ಷಗಳು ಉರುಳಿವೆ. ಇದೀಗ ಇನ್‌ಸ್ಟಾ ಖಾತೆಯಲ್ಲಿ ಇಬ್ಬರ ಪ್ರೇಮ ಪ್ರಸಂಗ ಅಧಿಕೃತವಾಗಿ ವ್ಯಕ್ತಗೊಂಡಿದೆ.

'ತೂ ಝೂಟಿ ಮೈ ಮಕ್ಕಾರ್' ಸಿನಿಮಾದಲ್ಲಿ ಒಟ್ಟಿಗೆ ಕೆಲಸ ಮಾಡಿದ ನಂತರ ಇಬ್ಬರೂ ಡೇಟಿಂಗ್ ಮಾಡುತ್ತಿದ್ದರು ಎನ್ನುವ ವದಂತಿ ಮೊದಲು ಹರಡಿತು.

ಆಮೇಲೆ ಇಬ್ಬರ ಚಲನವಲನ ಅದಕ್ಕೆ ಪುಷ್ಟಿ ಕೊಟ್ಟಿತು. ಇದೀಗ ಪ್ರೇಮಾಂಕುರ ಆಗಿರುವುದು ಸ್ಪಷ್ಟ ಆದಂತಾಗಿದೆ.

ಒಂದು ಸೆಲ್ಫಿ ತೆಗೆದು, ಇನ್‌ಸ್ಟಾಗ್ರಾಂ ಖಾತೆಯಲ್ಲಿ ಶ್ರದ್ಧಾ ಪೋಸ್ಟ್ ಮಾಡಿದ್ದಾರೆ. ಬಿಳಿಯುಡುಗೆಯಲ್ಲಿ ಜೋಡಿ ಇದ್ದು, ರಾಹುಲ್ ಒಂಥರಾ ತುಂಟ ಭಾವದ ಪೋಸ್ ನೀಡಿದ್ದಾರೆ. ಶ್ರದ್ಧಾ ನಗುನಗುತ್ತಾ ಇದ್ದಾರೆ.

'ಹೃದಯ ಇಟ್ಟುಕೋ... ನಿದ್ದೆಯನ್ನು ಮರಳಿಸು, ಜೊತೆಗಾರನೇ' ಎಂಬ ಅರ್ಥ ಕೊಡುವ ಒಕ್ಕಣೆಯನ್ನು ಪೋಸ್ಟ್‌ನಲ್ಲಿ ಬರೆದಿದ್ದಾರೆ.

ಅನಂತ್ ಅಂಬಾನಿ ಹಾಗೂ ರಾಧಿಕಾ ಮರ್ಚೆಂಟ್ ವಿವಾಹ ಆರತಕ್ಷತೆಯಲ್ಲಿ ಶ್ರದ್ಧಾ ಹಾಗೂ ರಾಹುಲ್ ಅನ್ಯೋನ್ಯವಾಗಿ ಇರುವ ಫೋಟೊಗಳನ್ನು ಛಾಯಾಚಿತ್ರಕಾರರು ತೆಗೆದಿದ್ದರು. ಮುಂಬೈನಲ್ಲಿ ಕಳೆದ ವರ್ಷ ರಾತ್ರಿ ಊಟ ಮಾಡಲು ಇಬ್ಬರೂ ಜೊತೆಯಾಗಿ ಹೋದಾಗಲೂ ಫೋಟೊ ತೆಗೆದಿದ್ದರು. ತಮ್ಮ ಖಾಸಗಿ ಕ್ಷಣಗಳ ಫೋಟೊ ತೆಗೆಯಕೂಡದು ಎಂದು ಆಗ ಶ್ರದ್ಧಾ ಹಾಗೂ ರಾಹುಲ್ ಎಚ್ಚರಿಸಿದ್ದರು.

ಈಗ ಅವರೇ ಅಧಿಕೃತವಾಗಿ ತಮ್ಮ ಪ್ರೇಮ ಪ್ರಸಂಗವನ್ನು ಪ್ರಕಟಪಡಿಸಿದಂತೆ ಆಗಿದೆ. ■

